ಅಧ್ಯಕ್ಷರು: ಮಾನ್ಯ ಸುಧಾಕರ್‌ರವರೇ ಅದರ ಬಗ್ಗೆ ತಿಳಿದುಕೊಂಡು ಅವರಿಗೆ ಡಿಟೇಲ್ಸ್ ಕಳುಹಿಸಿ ಕೊಡಿ.

ಶ್ರೀ ಡಿ. ಸುಧಾಕರ್: ಅವರಿಗೆ ಎಲ್ಲಾ ಮಾಹಿತಿಗಳನ್ನು ಕಳುಹಿಸಿ ಕೊಡಲಾಗುವುದು.

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಸಚಿವರಿಗೆ ತರಬೇತಿ ಕೊಡಿಸಿ. ಏಕೆಂದರೆ, ಸಡನ್ ಅಗಿ ಮಂತ್ರಿಗಳಾದವರು ಇದ್ದಾರೆ.

ಅಧ್ಯಕ್ಷರು: ಬಿ.ಸಿ. ಪಾಟೀಲ್ ರವರೆ ಸಾಕು ಬಿಡಿ. ಮಾನ್ಯ ಶಾಸಕರಿಗೂ ಹಾಗೂ ಮಾನ್ಯ ಸಚಿವರಿಗೂ ತರಬೇತಿ ಕೊಡಿಸೋಣ. ಆಯಿತು ಇಬ್ಬರಿಗೂ ಕೊಡಿಸೋಣ. ರೋಷನ್ ಬೇಗ್ ರವರೆ ತಾವು ಪ್ರಶ್ನೆ ಕೇಳಿ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

67:– ಶ್ರೀ ರೋಷನ್ ಬೇಗ್.ಆರ್.:– ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೌರಿಂಗ್ ಆಸ್ಪತ್ರೆಯಲ್ಲಿ ಔಷಧಿಗಳು ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಆ) ಔಷಧಿಗಳು ಇದ್ದರೂ ಅದನ್ನು ಸಾರ್ವಜನಿಕರಿಗೆ ವಿತರಿಸದೆ ದುರುಪಯೋಗವಾಗುತ್ತಿವೆಯೆ;

(ಇ) ಬೌರಿಂಗ್ ಆಸ್ಪತ್ರೆಯಲ್ಲಿ ಐಸಿಯು ವಿಭಾಗದಲ್ಲಿ ವೆಂಟಿಲೇಟರ್ ಸೌಲಭ್ಯವಿದೆಯೇ;

(ಈ) ವೆಂಟಿಲೇಟರ್ ಸೌಲಭ್ಯವಿದ್ದು, ಅದನ್ನು ಸದುಪಯೋಗಪಡಿಸಲಾಗುತ್ತಿದೆಯೆ;

(ಉ) ಈ ಸೌಲಭ್ಯವಿಲ್ಲದಿದ್ದಲ್ಲಿ ಕೈಗೊಂಡಿರುವ ಕ್ರಮಗಳೇನು?

ಬಿ. ಶ್ರೀರಾಮುಲು (ವೈದ್ಯಕೀಯ ಶಿಕ್ಷಣ ಸಚಿವರು):–

(ಅ) ಬಂದಿದೆ.

(ಆ) ಇಲ್ಲ

(ಇ) ಬೌರಿಂಗ್ ಆಸ್ಪತ್ರೆಯಲ್ಲಿ ಐ.ಸಿ.ಯು ವಿಭಾಗ ಇಲ್ಲ

(ಈ) ಉದ್ಭವಿಸುವುದಿಲ್ಲ.

(ಉ) ಈಗ ಐ.ಸಿ.ಯು. ಸ್ಥಾಪನೆಗೆ ಅಗತ್ಯ ಹಣ ಬಿಡುಗಡೆಗೆ ಆದೇಶ ಮಾಡಲಾಗಿದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 67

(ಉತ್ತರದ ಪ್ರತಿ ಲಗತ್ತಿಸಿದೆ)

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, ಬೌರಿಂಗ್ ಆಸ್ಪತ್ರೆಯಲ್ಲಿ Non availability of drugs ಎನ್ನುವ ಪ್ರಶ್ನೆಗೆ Yes ಎಂದಿದ್ದಾರೆ. ಮಿಸ್‌ಯೂಸ್ ಆಗುತ್ತಿದೆಯೇ ಎಂದು ಕೇಳಿದರೆ No ಎಂದಿದ್ದಾರೆ. ಇನ್ನೊಂದು ಪ್ರಶ್ನೆಗೆ, ಬೌರಿಂಗ್ ಆಸ್ಪತ್ರೆಯಲ್ಲಿ ಐಸಿಯು ವಿಭಾಗದಲ್ಲಿ ವೆಂಟಿಲೇಟರ್ ಸೌಲಭ್ಯವಿದೆಯೇ ಎಂದು ಕೇಳಿದಕ್ಕೆ, "there is no ICU in Bowring Hospital" ಎಂದು ಹೇಳಿದ್ದಾರೆ. ಈ ಸೌಲಭ್ಯಕ್ಕೆ required amount sanction ಮಾಡಿದ್ದೇವೆಂದು ಹೇಳುತ್ತಾರೆ. ಎಷ್ಟು amount sanction ಮಾಡಿದ್ದಾರೋ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ದೊಡ್ಡದಾದ ಬೋರಿಂಗ್ ಆಸ್ಪತ್ರೆಯಲ್ಲಿ ICU ಇಲ್ಲವೆಂದರೆ ಇದು ನಗುಪಾಟಲು. ಮೆಡಿಷನ್ ಬಗ್ಗೆ ಹೇಳುವುದಾದರೆ, IV canellas, IV fluids, antibiotics, non steriod anti inflammatory durgs, haemophelites, vitamin, surgical aids, ಯಾರಿಗಾದರೂ ಅಪಘಾತವಾಗಿ ಇಲ್ಲಿಗೆ ಬಂದರೆ ಆ ಬೋರಿಂಗ್ ಆಸ್ಪತ್ರೆಯಲ್ಲಿ ಸರ್ಜಿಕಲ್ ಬ್ಯಾಂಡೇಜ್ ಇಲ್ಲ. ಬ್ಯಾಂಡೇಜ್ ಕೊಡಿ ಎಂದರೆ ಹೊರಗಡೆಯಿಂದ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಮಿಸ್‌ಯೂಸ್ ಆಗುತ್ತಿದೆಯೇ ಎಂದು ಕೇಳಿದರೆ ಮಾನ್ಯ ಮಂತ್ರಿಗಳು ಇಲ್ಲ ಎಂದು ಹೇಳುತ್ತಾರೆ. ಮೊನ್ನೆ ನಾನು ಬೋರಿಂಗ್ ಆಸ್ಪತ್ರೆಗೆ ಹೋದಾಗ ಅಲ್ಲಿಂದಲೇ ಶಂಕರ್ ಲಿಂಗೇಗೌಡರವರಿಗೆ ಫೋನು ಮಾಡಿ ಒಬ್ಬ ಪೇಶೆಂಟ್ ಕಳುಹಿಸಿದ್ದೆ. ನಾಲ್ಕು ಸಾವಿರ ರೂಪಾಯಿ ಕೊಟ್ಟು ಹೊರಗಡೆಯಿಂದ ಮೆಡಿಷನ್‌ನ್ನು ತರಿಸಿಕೊಟ್ಟಿದ್ದಾರೆ. ಇಲ್ಲಿ ಇವರ ಒಬ್ಬ ಡೈರೆಕ್ಟರ್ ಏನು ಹೇಳುತ್ತಾರೆಂದರೆ, Additional Director of Government Medical Stores, Shivabasavaiah says for various reasons supply firm stopped the production of a particular drug and backed out from supplying it. ನಿಮ್ಮ ಅಧಿಕಾರಿಯಾದ Additional Director ರವರೇ ಈ ರೀತಿ ಹೇಳುತ್ತಾರೆ. Particular drugs ಗೆ ಇವರು suppliers withhold ಮಾಡುತ್ತಾರೆಂದರೆ, ನನ್ನ ಅಂದಾಜು ಏನೆಂದರೆ, ಆಸ್ಪತ್ರೆಯ ಆಚೆ ಇರುವ medical stores ಮತ್ತು ಆಸ್ಪತ್ರೆಯವರಿಗೆ nexus ಇದೆ. ನಿಮ್ಮ ಮೇನ್ ಮೆಡಿಕಲ್ ಸ್ಟೋರ್ಸ್ ಏನಿದೆ ಅಲ್ಲಿ ಎಲ್ಲಾ ಗೋಲ್‌ಮಾಲ್ ಆಗುತ್ತಿದೆ ದಯವಿಟ್ಟು ಇದರ ಬಗ್ಗೆ ಪರಿಶೀಲಿಸಬೇಕು. ಒಂದು ದಿವಸ ನನ್ನ ಜೊತೆಗೆ ಅವರು

ಬೌರಿಂಗ್ ಆಸ್ಪತ್ರೆಗೆ ಬಂದರೆ, ನಾನು ಆ ಆಸ್ಪತ್ರೆ ಯಾವ ರೀತಿ ಹಾಳಾಗಿ ಹೋಗಿದೆ ಎಂಬುದನ್ನು ತೋರಿಸುತ್ತೇನೆ. ನ್ಯೂರಾಲಜಿ ಡಿಪಾರ್ಟ್‌ಮೆಂಟ್ ಇಲ್ಲ. ಕಾರ್ಡಿಯಾಲಾಜಿ ಡಿಪಾರ್ಟ್‌ಮೆಂಟ್ ಇಲ್ಲ. ಯಾರಾದರೂ ಹಾರ್ಟ್ ಪೇಶೆಂಟ್ ಬಂದರೆ ಅವರನ್ನು ಜಯದೇವ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳುತ್ತಾರೆ. ಜಯದೇವ್ ಆಸ್ಪತ್ರೆಗೆ ಹೋಗುವಾಗ ಟ್ರಾಫಿಕ್‌ನಲ್ಲಿ ಎಷ್ಟೋ ಜನ ಮೇಲಕ್ಕೆ ಹೋಗಿ ಬಿಟ್ಟಿದ್ದಾರೆ. ಅದಕ್ಕೆ ತಾವು ಒಳ್ಳೆಯ ಸಂಸ್ಥೆಯಿಂದ ಬಂದಿದ್ದೀರಿ. You belong to a disciplined organization, you come from that. ದಯವಿಟ್ಟು ತಾವು ಇದರ ಬಗ್ಗೆ ಸೀರಿಯೆಸ್ಸಾಗಿ ಯೋಚಿಸಿಬೇಕು ಮತ್ತು ಒಂದು ದಿವಸ ನನ್ನ ಜೊತೆಗೆ ಬನ್ನಿ.

ಶ್ರೀ ರಾಮಚಂದ್ರಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಹಾಗೂ ಮಾಜಿ ಸಚಿವರಾದ ರೋಷನ್ ಬೇಗ್ ರವರು ಅನೇಕ ವಿಚಾರಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ವಿಶೇಷವಾಗಿ ಬೌರಿಂಗ್ ಆಸ್ಪತ್ರೆ ಬೆಂಗಳೂರಿನಲ್ಲಿಯೇ ಬಹಳ ಹಳೆಯ ಆಸ್ಪತ್ರೆ. ಈಗ ಏನಾಗಿದೆ ಎಂದರೆ, ಆಸ್ಪತ್ರೆಗಳಿಗೆ ಔಷಧಿಗಳನ್ನು ಕೊಂಡುಕೊಳ್ಳಬೇಕಾದರೆ ನಮ್ಮಲ್ಲಿ ಒಂದು ವ್ಯವಸ್ಥೆ ಮಾಡಿಟ್ಟುಬಿಟ್ಟಿದ್ದಾರೆ. ಕರ್ನಾಟಕ ರಾಜ್ಯ ಡ್ರಗ್‌ಲಾಜಿಸ್ಟಿಕ್ ಹಾಗೂ ವೇರ್ ಹೌಸಿಂಗ್ ಸೊಸೈಟಿಯ ಮೂಲಕವೇ ಶೇಕಡ 80 ರಷ್ಟು ಔಷಧಿಗಳನ್ನು ಮತ್ತು ಶೇಕಡ 20 ರಷ್ಟು ಔಷಧಿಗಳನ್ನು ಆ ಸಂಸ್ಥೆಗಳೇ ಕೊಂಡು ಕೊಳ್ಳತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. ರಾಜ್ಯದಲ್ಲಿ ಹತ್ತು ಕಾಲೇಜುಗಳಿವೆ. ಈ ಹತ್ತು ಕಾಲೇಜುಗಳಿರತಕ್ಕಂಥ ಜಾಗದಲ್ಲಿ ಆ ಎಲ್ಲಾ ಆಸ್ಪತ್ರೆಗಳು ಕೂಡ ವೈದ್ಯಕೀಯ ಶಿಕ್ಷಣ ಇಲಾಖೆಗೆ ಬರುತ್ತವೆ. ಬಹುತೇಕ ಕಾಲೇಜುಗಳು ಈಗ ಸ್ವಾಯತ್ತತೆ ಹೊಂದಿವೆ. ಸ್ವಾಯತ್ತತೆ ಹೊಂದಿರುವುದರಿಂದ ಔಷಧಿಗಳು ಅವರು ಪರ್ಚೆಸ್ ಮಾಡಿ ಇಲ್ಲಿಗೆ ಬಂದು ಹೋಗತಕ್ಕಂಥ ಹಿನ್ನಲೆಯಲ್ಲಿ ಅವರಿಗೆ ಬೇಕಾದಂಥ ಔಷಧಿಗಳು ದೊರಕುತ್ತಿಲ್ಲ ಎನ್ನುವ ಅಂಶ ನನ್ನ ಗಮನಕ್ಕೂ ಬಂದಿದೆ. ಈ ವಿಚಾರದಲ್ಲಿ ಶೇಕಡ 80 ಅವರು ಶೇಕಡ 20 ಇವರು ತೆಗೆದುಕೊಳ್ಳಬೇಕೆಂದು ಏನು ಇದೆ ಇದನ್ನು ಬದಲಾಯಿಸಿ ಶೇಕಡ 50 ರಷ್ಟನ್ನು ಲಾರ್ಜಸ್ಟಿಕ್ ನಿಂದ ತೆಗೆದುಕೊಂಡು ಶೇಕಡ 50 ರಷ್ಟನ್ನು ಆ ಆಸ್ಪತ್ರೆಗಳಲ್ಲಿರತಕ್ಕಂಥ ಅಧಿಕಾರಿಗಳೇ ತೆಗೆದುಕೊಂಡರೆ, ಅವರು ಔಷಧಿ ಏಕೆ ಇಲ್ಲವೆಂದು ಕೇಳಿದರೆ ನನಗೆ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ಹೀಗಾಗಿ ಒಂದು ವ್ಯವಸ್ಥೆ ಮಾಡಬೇಕೆಂದು ಯೋಚಿಸಿದ್ದೇನೆ. ಬೌರಿಂಗ್ ಆಸ್ಪತ್ರೆಯಲ್ಲಿ ICU ಅಲ್ಲಿ ಇಲ್ಲ. ಹೀಗಾಗಿ ಅಲ್ಲಿ ತಾವು ಕೇಳಿದ ಹಾಗೆ ICU ಇಲ್ಲದಿರುವುದರಿಂದ ಅಲ್ಲಿ ವೆಂಟಿಲೇಟರ್ ಇಡುವ

ಪರಿಸ್ಥಿತಿ ಇಲ್ಲ. ಹೀಗಾಗಿ ನಾನು ಬಂದ ಮೇಲೆ ವಿಕ್ಟೋರಿಯಾ ಆಸ್ಪತ್ರೆಗೆ 20 ಬೆಡ್‌ಗಳನ್ನು ಬೌರಿಂಗ್ ಆಸ್ಪತ್ರೆಗಳಿಗೆ 20 ಬೆಡ್‌ಗಳನ್ನು ICU ಯೂನಿಟ್ ಗಳನ್ನಾಗಿಸಬೇಕೆಂದು ಈಗಾಗಲೇ ನಾನು ವ್ಯವಸ್ಥೆ ಮಾಡಿದ್ದು, ಅದಕ್ಕೆ 14 ಕೋಟಿ ರೂಪಾಯಿಗಳನ್ನು ಕೋರಿದ್ದೇನೆ. 14 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ರಾಜ್ಯ ಸರ್ಕಾರ ಒಪ್ಪಿದೆ. ತಾವು ಈ ಬಜೆಟ್‌ನ್ನು ಮಾನ್ಯತೆ ಮಾಡಿದ ಕೂಡಲೇ ಆದಷ್ಟು ಬೇಗ ಈ ಎರಡು ಆಸ್ಪತ್ರೆಗಳಿಗೆ ICU ಯೂನಿಟ್‌ಗಳನ್ನು ಇಡುವಂಥ ವ್ಯವಸ್ಥೆಯಾಗುತ್ತದೆ. ಮತ್ತು ಶೇಕಡ 50 ರಷ್ಟು ಔಷಧಿಗಳನ್ನು ಕೊಂಡುಕೊಳ್ಳತಕ್ಕಂಥ ವ್ಯವಸ್ಥೆ ಆಸ್ಪತ್ರೆಗಳಿಗೆ ಕೊಟ್ಟು ಯಾವುದೇ ಸಂದರ್ಭದಲ್ಲಿ ರೋಗಿಗಳು ಹೋದರೆ ಔಷಧಿ ಇಲ್ಲ ಎನ್ನುವ ಪರಿಸ್ಥಿತಿ ಬರಬಾರದು ಎನ್ನುವ ಮಾತನ್ನು ಹೇಳುತ್ತಾ ತಾವೇನು ಬೌರಿಂಗ್ ಆಸ್ಪತ್ರೆಗೆ ನನ್ನ ಜೊತೆಯಲ್ಲಿ ಬರಬೇಕೆಂದು ಅಪೇಕ್ಷೆ ಪಟ್ಟಿದ್ದೀರಿ, ಖಂಡಿತವಾಗಿ ಇನ್ನು ಎರಡು ಮೂರು ದಿವಸದೊಳಗಾಗಿ ನಾನು ನಿಮ್ಮನ್ನು ಬೌರಿಂಗ್ ಆಸ್ತತ್ರೆಗೆ ಕರೆದುಕೊಂಡು ಹೋಗಿ ಎಲ್ಲಾ ವ್ಯವಸ್ಥೆಯನ್ನು ನೋಡಿಕೊಂಡು ಬರುವುದಕ್ಕೆ ವ್ಯವಸ್ಥಿತವಾಗಿ ತಮಗೆ ಮಾಡುತ್ತೇನೆಂದು ಹೇಳುತ್ತಾ ತಾವು ಕೊಡತಕ್ಕಂಥ ಎಲ್ಲಾ ಸಲಹೆಗಳನ್ನು ಅಂಗೀಕರಿಸಿ ಕೆಲಸ ಮಾಡುವಂಥ ಹಾದಿಯಲ್ಲಿ ಹೋಗುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಆರ್. ರೋಷನ್ ಬೇಗ್: ಧನ್ಯವಾದಗಳು

ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎನ್. ವೈ. ಗೋಪಾಲಕೃಷ್ಣ: ನನ್ನ ಕೊನೆಯ ಪ್ರಶ್ನೆ ಬಿಟ್ಟು ಬಿಟ್ಟಿರಿ

ಅಧ್ಯಕ್ಷರು: ಟೈಂ ಆಯಿತು. ಒನ್ ಅವರ್ ಆಯಿತು, ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ.

ಶ್ರೀ ಎನ್. ವೈ. ಗೋಪಾಲಕೃಷ್ಣ: ನಾನು ನಿಂತಿರುವುದೇ ಬಹಳ ಅಪರೂಪಕ್ಕೆ. ನಾನು ಯಾವತ್ತು ಏನು ಕೇಳುವುದಕ್ಕೆ ಹೋಗಿಲ್ಲ.

ಅಧ್ಯಕ್ಷರು: ಒಂದೊಂದು ಸಲ ಏನಾಗುತ್ತದೆ, ಕಂಟ್ರೋಲ್ ಮಾಡದಿದ್ದರೆ ಕಷ್ಟ, ಈಗ ಬೇಡ ಮುಂದಿನ ಸಾರಿ ತಮಗೆ ಬೇರೆ ರೂಪದಲ್ಲಿ ಅವಕಾಶ ಕೊಡುತ್ತೇನೆ.